ಪ್ರಶ್ನೋತ್ತರ

ಚುಕ್ಕೆ ಗುರುತಿನ ಪ್ರಶ್ನಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು.

ಪುತ್ತೂರು ಬೈಪಾಸ್ ರಸ್ತೆ ಕಾಮಗಾರಿಗಳು

376 - ಶ್ರೀ ಡಿ.ವಿ. ಸದಾನಂದ ಗೌಡ (ಪುತ್ತೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪುತ್ತೂರು ಬೈಪಾಸ್ ರಸ್ತೆಗೆ ಈ ತನಕ ಸರ್ಕಾರವು ವಿನಿಯೋಗಿಸಿದ ಒಟ್ಟು ಮೊತ್ತವೆಷ್ಟು?

ಆ) ಈ ಕಾಮಗಾರಿ ಪೂರ್ತಿಗೊಳಿಸಲು ಬೇಕಾಗುವ ಮೊತ್ತವೆಷ್ಟು?

ಇ) ಈ ವರ್ಷ ಈ ಕಾಮಗಾರಿಗಾಗಿ ಒಟ್ಟು ಎಷ್ಟು ಹಣ ಬಿಡುಗಡೆ ಮಾಡಲಾಗಿದೆ, ಈವರೆವಿಗೆ ಖರ್ಚಾದ ಹಣವೆಷ್ಟು?

ಈ) ಈ ಕಾಮಗಾರಿಯನ್ನು ಯಾವಾಗ ಪೂರ್ತಿಗೊಳಿಸಲಾಗುವುದು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರ) :

ಅ) ಪುತ್ತೂರು ಹೊರ ರಸ್ತೆಗೆ ಈ ತನಕ 168.93 ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿದೆ.

ಆ) ಈ ಕಾಮಗಾರಿ ಪೂರ್ಣಗೊಳಿಸಲು ಬಾಕಿ 50.00 ಲಕ್ಷ ರೂ.ಗಳಷ್ಟು ಬೇಕಾಗುತ್ತದೆ.

ಇ) ಈ ಸಾಲಿನ ಆಯವ್ಯಯದಲ್ಲಿ 20.00 ಲಕ್ಷ ರೂ.ಗಳ ಅನುದಾನ ಒದಗಿಸಲಾಗಿದೆ.

ಈ) 1998 ಡಿಸೆಂಬರ್‌ನಲ್ಲಿ ಪೂರೈಸಲಾಗುವುದು.

ಶ್ರೀ ಡಿ.ವಿ. ಸದಾನಂದ ಗೌಡ : ಮಾನ್ಯ ಅಧ್ಯಕ್ಷರೆ, ನಾನು ಎರಡೇ ಎರಡು ಪ್ರಶ್ನೆಗಳನ್ನು ಇಲ್ಲಿ ಕೇಳುವುದಕ್ಕೆ ಇಚ್ಛಿಪಡುತ್ತೇನೆ. ಲೋಕೋಪಯೋಗಿ ಇಲಾಖೆಯಲ್ಲಿ ಯಾವ ಸಮಯಕ್ಕೆ ತಾವು ಕೆಲಸವನ್ನು ಮುಗಿಸುತ್ತೇವೆಂದು ಹೇಳುತ್ತಿರೋ ಆ ಸಮಯಕ್ಕೆ ಮುಗಿಸುವ ವ್ಯವಸ್ಥೆ ಇದೆಯೇ? ಈ ಪರ್ಟಿಕ್ಯೂಲರ್ ಕೇಸ್‌ನಲ್ಲಿ ನವೆಂಬರ್ 1996ಕ್ಕೆ ನಾವು ಕೆಲಸವನ್ನು ಮುಗಿಸುತ್ತೇವೆಂದು ಹೇಳಿ ಇವತ್ತಿನ ಉತ್ತರದಲ್ಲಿ ತಾವು 1998ನೇ ಡಿಸೆಂಬರ್‌ಕ್ಕೆ ಮುಗಿಸುತ್ತೇನೆಂದು ಹೇಳಿದ್ದೀರಿ. ಪ್ರತಿ ಕಾಮಗಾರಿಗಳನ್ನು ನಾವು ನೋಡಿದಾಗ ಆ ನಿಗದಿತ ಸಮಯಕ್ಕೆ ಮುಗಿಸದೆ ಇರುವ ಕಾರಣ ಏನು? ಈ ಕೇಸ್‌ನಲ್ಲಿ ಸ್ವಲ್ಪ ಡಿಸ್‌ಪ್ಯೂಟ್ ಇದೆ, ಕೆಲಸ ಮುಗಿಸುವುದಕ್ಕೆ 50 ಮೀಟರ್‌ದಲ್ಲಿ ತೊಂದರೆ ಆಗಿದೆ ಎಂದು ಹೇಳಿದಿರಿ. ಇದಕ್ಕಾಗಿ ಮಾತುಕತೆ ಮೂಲಕ ಏನಾದರೂ ವಿಶೇಷ ಪ್ರಯತ್ನ ಮಾಡಿದ್ದೀರಾ ಅಥವಾ ಕೋರ್ಟ್‌ನಲ್ಲಿ ಆದಷ್ಟು ಶೀಘ್ರ ಮುಗಿಸಲಿಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) : ಸನ್ಮಾನ್ಯ ಸಭಾಧ್ಯಕ್ಷರೆ, ಈ ಕೆಲಸವನ್ನು 1998ನೇ ಡಿಸೆಂಬರ್ ಒಳಗಾಗಿ ಮುಗಿಸುವುದಕ್ಕೆ ಈಗಾಗಲೇ ಹೇಳಿಕೆಯನ್ನು ಇದರಲ್ಲಿ

ಕೊಟ್ಟಿದ್ದೇವೆ. ಆದರೆ ಈ ಸ್ಥಳದ ಬಗ್ಗೆ ಡಿಸ್ಪೂಟ್ ಬಂದಿರುವ ಬಗ್ಗೆ ಯಾವುದೇ ಡಿಸ್ಪೂಟ್ ಉಳಿದಿಲ್ಲ. ಅದನ್ನು ತಮ್ಮ ಗಮನಕ್ಕೆ ತರಲು ಇಚ್ಛಿಪಡುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ : ಸರ್ವೆ ನಂಬರ್ 201. 2(ಬಿ) (3) ಅದರಲ್ಲಿ 32 ಸೆಂಟ್ಸ್ ಜಾಗದಲ್ಲಿ ಈಗಾಗಲೇ ಡಿಸ್ಯೂಟ್ ಇದ್ದು ಹೈಕೋರ್ಟ್‌ನಲ್ಲಿ ಅಲ್ಲಿ ಯಾವುದೇ ಕಾಮಗಾರಿ ಮಾಡಬಾರದು ಎಂದು ಸ್ಟೇ ಇರುವುದು ಇನ್ನೂ ಸರ್ಕಾರದ ಗಮನಕ್ಕೆ ಬರಲಿಲ್ಲ ಎಂದು ಹೇಳಿದರೆ ಬಹಳ ಬೇಸರದಿಂದ ಹೇಳಬೇಕಾಗಿದೆ. 156 ಲಕ್ಷ ರೂಪಾಯಿಯ ಒಂದು ಕಾಮಗಾರಿಯನ್ನು ಕೈಗೆತ್ತಿಕೊಂಡ ಈ ಸಂದರ್ಭದಲ್ಲಿ ಆ ಲ್ಯಾಂಡ್ ಅಕ್ವಿಸಿಷನ್ ಬಾಕಿ ಎಲ್ಲದಕ್ಕೂ ಸೇರಿ ಇನ್ನೂ ಕೂಡ ಲ್ಯಾಂಡ್ ಅಕ್ವಿಸಿಷನ್ ಕೇಸ್ ಇದ್ದು ಅಲ್ಲಿ ರೋಡ್ ಮಾಡಲಿಕ್ಕೆ ಆಗುವುದಿಲ್ಲ ಎಂದು ಹೇಳುವಂತಹ ಎಂಥೆಂಟಿಕೇಟೆಡ್ ಕಾಪಿ ನಿಮ್ಮ ಇಲಾಖೆಯಿಂದ ನಮಗೆ ಸಿಕ್ಕಿರುವಂಥಾದ್ದು. ನಾನೇನೂ ಸುಮ್ಮನೇ ಹೇಳುತ್ತಿಲ್ಲ. ಒಂದು ಇಲಾಖೆ ಒಂದು ಕಾಮಗಾರಿ ಮಾಡಲಿಕ್ಕೆ ಬಹುಶಃ ಇದೇಕಾರಣ ಇರಬಹುದು. ಅದರ ಮಾಹಿತಿ ಗೊತ್ತಿಲ್ಲ. ಅದರಲ್ಲಿ ಏನು ತೊಂದರೆ ಇದೆ ಎಂಬುದು ಗೊತ್ತಿಲ್ಲ. ಅದರ ಬಗ್ಗೆ ಒಟ್ಟು ನಾವು ಕೆಲಸ ಮಾಡುತ್ತೇವೆಂದು ಹೇಳಿ ಕಲ್ಲುಹಾಕಿ ಹೋಗುವಂತಹ ಅಭ್ಯಾಸಗಳು ಹಿಂದಿನಿಂದ ನಡೆದು ಬಂದದ್ದು.

ಅಧ್ಯಕ್ಷರು : ಸದಾನಂದ ಗೌಡರೇ, ಏನಾಯಿತು ಎಂದರೆ ನಾವು ಇದ್ದಕ್ಕಿದ ಹಾಗೆ ಪ್ರಶ್ನೋತ್ತರ ತೆಗೆದುಕೊಂಡಿದ್ದೇವೆ. ಕಾರ್ಯದರ್ಶಿಗಳು ಇಲ್ಲಿ ಬಂದಿಲ್ಲ. ಮಂತ್ರಿಗಳು ಮಾತ್ರ ಇದ್ದಾರೆ. ಕಾರ್ಯದರ್ಶಿಗಳು ಇದ್ದಿದ್ದರೆ ತಕ್ಷಣ ಆ ಮಾಹಿತಿ ಅವರಿಗೆ ಒದಗಿಸಿಕೊಡುತ್ತಿದ್ದರು. ಅವರ ಫೈಲ್‌ನಲ್ಲಿ ಏನೂ ಇಲ್ಲ ಎಂದು ಹೇಳಿ ಬಿಟ್ಟರು. ನಿಮ್ಮ ಹತ್ತಿರ ಮಾಹಿತಿ ಇದೆ ಅವರ ಹತ್ತಿರ ಇಲ್ಲ.

ಶ್ರೀ ಡಿ.ವಿ. ಸದಾನಂದ ಗೌಡ : ರಿಪ್ಲೈ ರೆಡಿ ಇಟ್ಟುಕೊಂಡು ಬಂದಿರಬೇಕಲ್ಲಾ ಸಾರ್.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿನ್ನೆ ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತು ಹೇಳಿದ್ದಾರೆ. ತಾವು ಗಮನಿಸಿದ್ದೀರೋ ಇಲ್ಲವೋ ಗೊತ್ತಿಲ್ಲ. ಮಂತ್ರಿಗಳ ಮಾತನ್ನು ನೀವು ಕೇಳಬೇಕಾಗಿಲ್ಲ. ಧೈರ್ಯವಾಗಿ ನೀವೇ ತೀರ್ಮಾನ ತೆಗೆದುಕೊಳ್ಳಿ ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಈಗ ಆ ಪರಿಸ್ಥಿತಿ ಬರಬಾರದು. ನಾಳೆ ಇಲ್ಲಿ ಬಂದು ಅಧಿಕಾರಿಗಳೇ ಉತ್ತರ ಕೊಡುವಂತಹ ಪರಿಸ್ಥಿತಿ ಬರಬಾರದು ಎಂದು ಹೇಳಿದೆ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆಯನ್ನು ನಾನೂ ಓದಿದ್ದೇನೆ. ಮುಖ್ಯಮಂತ್ರಿಗಳು ಹೇಳಿರತಕ್ಕದ್ದು ಅಧಿಕಾರಿಗಳು ರಾಜಕೀಯ ಒತ್ತಡಗಳಿಗೆ ಮಣಿದು ತೀರ್ಮಾನವನ್ನು ತೆಗೆದು ಕೊಳ್ಳಬೇಕಾಗಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಂತ್ರಿಗಳು ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ನಾನು ಅದನ್ನು ಬೇರೆ ರೂಪದಲ್ಲಿ ಚರ್ಚೆಗೆ ತೆಗೆದುಕೊಳ್ಳುವವನು ಇದ್ದೇನೆ. ಮಂತ್ರಿಗಳು ಈಗಾಗಲೇ ಪ್ರತಿಭಟನೆ ಮಾಡಬೇಕಾಗಿತ್ತು. ಏಕೆ ಸುಮ್ಮನೇ ಇದ್ದಾರೋ ನನಗೆ ಗೊತ್ತಿಲ್ಲ. ಆದರೆ ಬೇರೆ ರೂಪದಲ್ಲಿ ಚರ್ಚೆಗೆ

ತೆಗೆದುಕೊಳ್ಳೋಣ. ಅವರು ಹೇಳಿರುವಂತಹದು ಅಧಿಕಾರಿಗಳು ಧೈರ್ಯದಿಂದ ಕೆಲಸ ಮಾಡಿ, ಮಂತ್ರಿಗಳ ಒಂದು ಇಕ್ಕಟ್ಟಿಗೆ ನೀವು ಸಿಕ್ಕಿ ಹಾಕಿಕೊಳ್ಳಬೇಡಿ ಎಂದು ಹೇಳಿದ್ದಾರೆ. ನೀವು ಮಂತ್ರಿಗಳಿಗೆ ಅಯ್ಯೋ ಪಾಪ ಎಂದು ರಕ್ಷಣೆ ಮಾಡುವುದಕ್ಕೆ ಹೊರಟಿದ್ದೀರಿ. ಅದು ಒಳ್ಳೆಯದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ತಪ್ಪು ತಿಳಿದುಕೊಂಡಿದ್ದಾರೆ. ಮಂತ್ರಿಗಳು ಯಾವಾಗಲೂ ನಿಮಗೆ ರೂಲ್ಸ್ ಬಿಟ್ಟು ಹೇಳುತ್ತಾರೆ. ಅದಕ್ಕಾಗಿ ನೀವು ರೂಲ್ಸ್‌ನಲ್ಲಿ ಏನು ಇದೆ, ಅದನ್ನು ಮಾಡಿ. ರೂಲ್ಸ್ ಬಿಟ್ಟು ಮಾಡಬೇಡಿ ಎಂದು ಅವರಿಗೆ ಮುಖ್ಯಮಂತ್ರಿಗಳು ಹೇಳಿರಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಜನತೆಗೆ ಅನುಕೂಲ ಆಗುವುದಾದರೆ ರೂಲ್ಸ್ ಅನ್ನು ಕಿತ್ತೊಗೆದು ಮಾಡುವಂತಹ ಧೈರ್ಯ ಮಾಡಬೇಕಾಗುತ್ತದೆ ಅಧಿಕಾರಿಗಳು.

ಅಧ್ಯಕ್ಷರು : ಈಗ ಪ್ರಶ್ನೋತ್ತರದ ಸಮಯ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಬಹುಶಃ ಅವರೆಲ್ಲರೂ ಕೂಡ ರೂಲ್ಸ್ ಬಿಟ್ಟು ಮಾಡುವ ಜವಾಬ್ದಾರಿ ಹೊತ್ತುಕೊಂಡಿಲ್ಲ ಎಂದು ಕಾಣುತ್ತದೆ.

ಅಧ್ಯಕ್ಷರು : ನನಗೆ ಏನು ಅಂದರೆ ಮಂತ್ರಿಗಳ ಪರವಾಗಿ ಇಷ್ಟೊಂದು ಕಾಳಜಿ ವಹಿಸುತ್ತೀರಲ್ಲಾ ನಮಗೆ ಅದೇ ಖುಷಿ. ಈ ರೀತಿಯ ಒಡಂಬಡಿಕೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮುಂದೆ ಕೆಲವೇ ದಿವಸದಲ್ಲಿ ಇದೇ ಅದಲು ಬದಲಾದಾಗ ಅಲ್ಲಿರುವಂತಹವರಿಗೆ ಬರಬಾರದು ಎಂದು ಹೇಳಿ ಈಗಲೇ ಎಚ್ಚರ ವಹಿಸುವುದು.

ಶ್ರೀ ರಮೇಶ್ ಸಿ. ಜಿಗಜಿಣಗಿ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರು ಬಹುಶಃ ಮಂತ್ರಿ ಆಗಿಲ್ಲ. ಇವರು ನಡೆಸಿದವರು. ಇವರೇನಾದರೂ ರೂಲ್ಸ ಬಿಟ್ಟು ಮಾಡಿ ಎಂದು ಹೇಳುತ್ತಿದ್ದರೋ ಎಂದು ಹೇಗೋ ನಮಗೆ ಕಲ್ಪನೆ ಇಲ್ಲ. ನಾವಂತೂ ಹೇಳುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಏನಾದರೂ ಹೇಳಿ ಅಂದರೆ ನಾನು ಹೇಳುತ್ತೇನೆ. ಡಿಸಿಷನ್ ಯೂಸ್ ಮಾಡುವಾಗ ಎಲ್ಲರೂ ಹಾಗೆಯೇ ಮಾಡುವುದು. ಅದರಲ್ಲಿ ನೀವು ಅತೀ ಹೆಚ್ಚಿನವರು. 100 ಪರ್ಸೆಂಟ್ ನಿಮ್ಮಷ್ಟು ಯಾರೂ ಮಾಡಿಲ್ಲ.

(ಗೊಂದಲ)

ಅಧ್ಯಕ್ಷರು : ಇದು ಪ್ರಶ್ನೋತ್ತರ ವೇಳೆ ದಯಮಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಲ್ಲ ಸಾರ್ ಕಾನೂನು ಇರುವುದು ಏಕೆ? ಜನಗಳಿಗೆ ಅನುಕೂಲ ಮಾಡಿಕೊಡುವುದಕ್ಕೆ. ಆ ಕಾನೂನಿನಿಂದ ಅನುಕೂಲ ಆಗಲಿಲ್ಲ ಎಂದರೆ ಅದನ್ನು ಕಿತ್ತೊಗೆದು ಡೈರೆಕ್ಷನ್ಸ್ ಕೊಡುವಂತಹ ಅಧಿಕಾರ ನಿಮಗೆ ಇದೆ.

ಶ್ರೀ ಸಿ.ಎಂ. ಉದಾಸಿ : ಸನ್ಮಾನ್ಯ ಸದಸ್ಯರು ಆತಂಕ ವ್ಯಕ್ತಪಡಿಸಿರುವಂತಹ ಮಾಹಿತಿ ತೆಗೆದುಕೊಂಡು ನಾನು ಪರಿಶೀಲನೆ ಮಾಡಿ ಮುತ್ತೊಂದು ಸಲ ಪರಿಹರಿಸುತ್ತೇನೆ.

ಶ್ರೀ ಡಿ.ವಿ. ಸದಾನಂದ ಗೌಡ : ನಾನು ಮಂತ್ರಿಗಳ ಬಗ್ಗೆ ಏನೂ ಹೇಳುವುದಿಲ್ಲ. ಏಕೆಂದರೆ ಮಾಹಿತಿ ಲಭ್ಯ ಇಲ್ಲ ಎಂದು ಹೇಳುವುದರ ಬಗ್ಗೆ ನನ್ನ ಆಕ್ಷೇಪ ಇಲ್ಲ. ಆದರೆ ನಾನು ಅವರಿಗೆ ಮಾಹಿತಿಗಳನ್ನು ಕೊಡುತ್ತೇನೆ. ಸರ್ವೆ ನಂಬರ್ 301: 2ಬಿ (2)ರಲ್ಲಿ 32 ಸೆಂಟ್ಸ್, the length of the road not formed due to dispute in Kms. 0.35 to 0.40 ವರೆಗೆ ಇನ್ನೂ ಮಾಡಲಿಕ್ಕೆ ಆಗಲಿಲ್ಲ. ನಾನು ಇಷ್ಟನ್ನು ಕೇಳುವಂತಹದು. ಸಾಧಾರಣ ಯಾವುದೇ ಇಂತಹ ಲ್ಯಾಂಡ್ ಡಿಸ್ಪ್ಯೂಟ್ ಕೇಸ್‌ಗಳು. ಒಂದು ಕೋರ್ಟಿಗೆ ಹೋದಾಗ ಸರ್ಕಾರ ತುಂಬಾ ನಿಗಾವಹಿಸುವುದಿಲ್ಲ. ದಯವಿಟ್ಟು ಈ ಕೇಸಿನಲ್ಲಿ ನಿಗಾ ವಹಿಸಬೇಕು. ತಕ್ಷಣ ಇದನ್ನು ಕ್ಲಿಯರ್ ಮಾಡಿಕೊಟ್ಟರೆ ಬಾಕಿ ಪೋರ್ಷನ್ ಕೆಲಸ ಆಗುತ್ತದೆ. ಇಂಜಿನಿಯರಿಂಗ್ ಡಿಪಾರ್ಟ್‌ಮೆಂಟ್‌ನವರು ಚೆನ್ನಾಗಿ ಕೆಲಸ ಮಾಡಿದ್ದಾರೆ. ಅದರ ಬಗ್ಗೆ ಆರೋಪ ಇಲ್ಲ. ಭಾರೀ ಸ್ಪೀಡಾಗಿ ಕೂಡ ಮಾಡುತ್ತಿದ್ದಾರೆ. ಆದರೆ ಆ ಕೆಲಸಗಳನ್ನು ತಕ್ಷಣ ಅಟೆಂಡ್ ಮಾಡಬೇಕು ಮತ್ತು.

MR. SPEAKER : I will advise him.

ಶ್ರೀ ಸಿ.ಎಂ. ಉದಾಸಿ : ನ್ಯಾಯಾಲಯದ ಆದೇಶವನ್ನು ಪರಿಗಣನೆಗೆ ಇಟ್ಟುಕೊಂಡು ಅದನ್ನು ತೀವ್ರಗತಿಯಲ್ಲಿ ಪರಿಹರಿಸಿ ಕಾರ್ಯಕ್ರಮವನ್ನು ಮಾಡಿಸುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ : ಅವರೇನು ಸ್ಟೆಪ್ಸ್ ತೆಗೆದುಕೊಂಡಿದ್ದಾರೆ ಎಂಬುದರ ಬಗ್ಗೆ ಕಮ್ಯುನಿಕೇಟ್ ಮಾಡಲಿ.

ಅಧ್ಯಕ್ಷರು : ಆಯಿತು,

ರಾಜ್ಯದಲ್ಲಿ ಇ.ಎಸ್.ಐ. ಆಸ್ಪತ್ರೆಗಳನ್ನು ಹೆಚ್ಚಿಸುವುದು

377 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಇರುವ ಇಎಸ್‌ಐ ಹಾಗೂ ಡಿಸ್ಪೆನ್ಸರಿಗಳ ಸಂಖ್ಯೆ ಎಷ್ಟು?

ಆ) ಈ ಸೌಲಭ್ಯವನ್ನು ಒಟ್ಟು ಎಷ್ಟು ಜನ ಕಾರ್ಮಿಕರು ಹಾಗೂ ಅವರ ಕುಟುಂಬದವರು ಪಡೆಯುತ್ತಿದ್ದಾರೆ?

ಇ) ಇದು ಸಾಲದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಈ) ಇದರ ಪರಿಹಾರಕ್ಕಾಗಿ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಬಿ. ಸತ್ಯನಾರಾಯಣ (ಕಾರ್ಮಿಕ ರಾಜ್ಯ ಸಚಿವರು) :

ಅ) ರಾಜ್ಯದಲ್ಲಿ 7 ಕಾರಾವಿ ಆಸ್ಪತ್ರೆಗಳು 3 ಅನುಬಂಧ ಆಸ್ಪತ್ರೆಗಳು ಹಾಗೂ 146 ಚಿಕಿತ್ಸಾಲಯಗಳು ಇವೆ.